KARNATAKA STATE
CHARTERED ACCOUNTANTS ASSOCIATION (R.)

Since 1957

CA Pramod Srihari
President
CA Vijaykumar M Patel
Secretary


ಇವರಿಗೆ, 15–06–2023

ಮಾನ್ಯ ನಿರ್ದೇಶಕರು,
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ,
ನಂ. 17, ಜಯನಿವಾಸ, ಶಂಕರಮಠರಸ್ತೆ,
ಬಸವನಗುಡಿ, ಬೆಂಗಳೂರು.

ಮಾನ್ಯರೇ,

ವಿಷಯ:ಸಹಕಾರ ಸಂಘಗಳ ಮಾದರಿ ಆರ್ಥಿಕ ತಖ್ತೆಗಳ ಅಳವಡಿಕೆಯ ಬಗ್ಗೆ.

ಉಲ್ಲೇಖ : ಸಹಕಾರ ದರ್ಪಣ ಜಾಲತಾಣದಲ್ಲಿ ತಾವು ಪ್ರಕಟಿಸಿರುವ ಮಾದರಿ ಆರ್ಥಿಕ ತಃಖ್ತೆಗಳು

ಕರ್ನಾಟಕರಾಜ್ಯ ಸನ್ನದು ಲೆಕ್ಕಿಗರ ಸಂಘ, (The Karnataka State Chartered Accountants Association, in short KSCAA)ಇದು ಕರ್ನಾಟಕ ಸಂಘಗಳ ನೊಂದಣಿಕಾಯ್ದೆ 1957ರ ಅಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿರುತ್ತದೆ. ನಮ್ಮ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಸನ್ನದು ಲೆಕ್ಕಿಗರು (Chartered Accountants in Karnataka) ಸದಸ್ಯರಾಗಿರುತ್ತಾರೆ. ಪ್ರಸ್ತುತ ರಾಜ್ಯದಲ್ಲಿ ಅಂದಾಜು 16,000 ಸನ್ನದು ಲೆಕ್ಕಿಗರು ಇದ್ದು ನಮ್ಮ ಸಂಸ್ಥೆಯಲ್ಲಿಅಂದಾಜು 3,600 ಸನ್ನದು ಲೆಕ್ಕಿಗರು ಸದಸ್ಯರಾಗಿರುತ್ತಾರೆ.

2013 ರಲ್ಲಿಕರ್ನಾಟಕರಾಜ್ಯ ಸರ್ಕಾರವು, 'ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959' ಇದರ ತಿದ್ದುಪಡಿ ಮೂಲಕ ಸನ್ನದು ಲೆಕ್ಕಿಗರನ್ನು, ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಅನುವು ಮಾಡಿಕೊಟ್ಟಿರುತ್ತದೆ. ಸನ್ನದು ಲೆಕ್ಕಿಗರ ಪರವಾಗಿ ನಮ್ಮ ಸಂಸ್ಥೆಯಿಂದ ತಮ್ಮ ಇಲಾಖೆಗೆ ಈ ಹಿಂದೆ ಹಲವಾರು ಬಾರಿ ವಿವಿಧ ವಿಷಯಗಳ ಮೇಲೆ ಸಲಹೆ, ಸೂಚನೆ ಮತ್ತು ಶಿಫಾರಸ್ಸುಗಳನ್ನು ಮಾಡುತ್ತಾ ಬಂದಿರುತ್ತೇವೆ.

ತಮ್ಮ ಇಲಾಖೆಯಿಂದ ಬೆಳಗಾವಿಯಲ್ಲಿ ದಿನಾಂಕ 10–03–2023 ರಂದು ನಡೆದ ಕಾರ್ಯಾಗಾರದಲ್ಲಿ, ನಮ್ಮ ಸಂಸ್ಥೆಯಿಂದ ಕೆಲವು ಪ್ರಸ್ತಾವನೆಗಳನ್ನು ಮಂಡಿಸಿದ್ದೆವು. ಸದರಿ ಪ್ರಸ್ತಾವನೆಗಳಲ್ಲಿನ ಕೋರಿಕೆಯ ಮೇರೆಗೆ ತಮ್ಮ ಇಲಾಖಾ ಅಧಿಕಾರಿಗಳೊಡನೆ ಸನ್ನದು ಲೆಕ್ಕಪರಿಶೋಧಕರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿರುವುದು ಶ್ಲಾಘನೀಯ ಹಾಗೂ ಇದಕ್ಕಾಗಿ ನಿಮ್ಮ ಇಲಾಖೆಯನ್ನು ಅಭಿನಂದಿಸುತ್ತೇವೆ.


No. 67, 1st Floor, West of Chord Road, 2nd Stage, Mahalakshmipuram, Bangalore 560 086.
Phone : +91 80 2955 2155 | Email : info@kscaa.com | Website : www.kscaa.com

ತಾವು 12–05–2023 ರಂದು ತಮ್ಮ ಇಲಾಖಾ ಅಧಿಕಾರಿಗಳು ಮತ್ತು ಸನ್ನದು ಲೆಕ್ಕಪರಿಶೋಧಕರನ್ನು ಒಳಗೊಂಡ ಸಮಿತಿಯ ಸಭೆಯಲ್ಲಿ ಚರ್ಚಿಸಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮತ್ತು ಪತ್ತಿನ ಸಹಕಾರ ಸಂಘಗಳಿಗೆ ಲೆಕ್ಕಪರಿಶೋಧನಾ ವರದಿ ನಮೂನೆಗಳನ್ನು ಅಂತಿಮಗೊಳಿಸಿ ಮೇ ತಿಂಗಳಿನಲ್ಲಿ ಪ್ರಕಟಿಸಿ ತಕ್ಷಣವೇ ಅಳವಡಿಸಿಕೊಳ್ಳಲು ಸೂಚಿಸಿರುತ್ತೀರಿ.

ಮುಂದುವರೆದು ಸಹಕಾರ ಸಂಘಗಳಿಗೆ ಏಕರೂಪದ ಮಾದರಿ ಆರ್ಥಿಕ ತಖ್ತೆಗಳನ್ನು ಪ್ರಚುರಪಡಿಸುವ ಸಂಬಂಧ ದಿನಾಂಕ 16–05–2023ರಂದು ಪ್ರಕಟಣೆ ನೀಡಿ, ದಿನಾಂಕ 18–05–2023ರಂದು ಜಾಲತಾಣದಲ್ಲಿ ಮಾದರಿ ಆರ್ಥಿಕ ತಃಖ್ತೆಗಳನ್ನು ಬಿಡುಗಡೆಗೊಳಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸೂಚಿಸಿರುತ್ತೀರಿ.

ಆರ್ಥಿಕ ತಖ್ತೆಗಳನ್ನು ತಯಾರಿಸುವುದು ಸಂಬಂಧಪಟ್ಟ ಸಂಘದ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಯಾಗಿರುತ್ತದೆ. ಗಣಕೀಕೃತಗೊಂಡ ಸಹಕಾರ ಸಂಘಗಳಲ್ಲಿ ಸದರಿ ನಮೂನೆಗಳನ್ನು ತಂತ್ರಾಂಶದಲ್ಲಿ ಅಳವಡಿಸಿಕೊಂಡು ಆರ್ಥಿಕ ವರ್ಷದ ಪ್ರಾರಂಭದಿಂದಲೂ ಸಂಘದವರು ನಿಗದಿಪಡಿಸಿದ ಶೀರ್ಷಿಕೆ ಮತ್ತು ಮಾದರಿ ಗುಂಪುಗಳಡಿ ಅಕೌಟಿಂಗ್ ಮಾಡಿದಾಗ ಮಾತ್ರ ತಾವು ಪ್ರಚುರ ಪಡಿಸಿದ ಮಾದರಿಯಲ್ಲಿ ಆರ್ಥಿಕ ತಖ್ತೆಗಳನ್ನು ಒದಗಿಸಬಹುದು ಹಾಗೂ ಕೈಬರಹದ ಲೆಕ್ಕ ಪತ್ರಗಳಲ್ಲಿಯೂ ಸಹ ಆರ್ಥಿಕ ವರ್ಷದ ಪ್ರಾರಂಭದಿಂದಲೇ ಅಕೌಟಿಂಗ್ ಮಾಡಬೇಕಾಗುತ್ತದೆ.

ನೂತನವಾಗಿ ಪ್ರಚುರ ಪಡಿಸಿದ ಮಾದರಿ ಆರ್ಥಿಕ ತಖ್ತೆಗಳ/ಶಿರ್ಷೀಕೆಗಳ ಅಳವಡಿಕೆ ಮಾಹಿತಿಯನ್ನು ಆರ್ಥಿಕ ವರ್ಷ ಪ್ರಾರಂಭವಾಗುವ ಮುಂಚಿತವಾಗಿ ಸಂಘಗಳ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕರುಗಳ ಗಮನಕ್ಕೆ ಬರುವಂತೆ ನಿಯಮಾನುಸಾರ ಪ್ರಕಟಿಸಿ ತಿಳುವಳಿಕೆ ನೀಡಿದ ನಂತರ ಅಳವಡಿಸಿಕೊಳ್ಳುವುದು ಸಂಘದವರ ಜವಾಬ್ದಾರಿಯಾಗಿರುತ್ತದೆ. ಮತ್ತು ಸಹಕಾರ ಸಂಘಗಳ ಕಾಯ್ದೆ ಕಲಂ 63(7) ಮತ್ತು ನಿಯಮ 29(3)ರನ್ವಯ ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಆರ್ಥಿಕ ತಃಖ್ತೆಗಳನ್ನು ನಿಗದಿತ ಶೆಡ್ಯೂಲ್ ಗಳ ಸಹಿತ ತಯಾರಿಸಿ ಅಂತಿಮಗೊಳಿಸಿ ಆಡಳಿತ ಮಂಡಳಿಯಲ್ಲಿ ಮಂಡಿಸಿ ಅನುಮೋದಿಸಿ ಸಂಬಂಧಿತ ಲೆಕ್ಕಪರಿಶೋಧಕರಿಗೆ ಹಾಜರುಪಡಿಸತಕ್ಕದ್ದು ಎಂಬುದು ಸ್ಪಷ್ಟವಾಗಿರುತ್ತದೆ.

ಬಹುತೇಕ ಸಹಕಾರ ಸಂಘಗಳಿಗೆ ನೂತನವಾಗಿ ಪ್ರಚುರಪಡಿಸಿದ ಮಾದರಿ ಆರ್ಥಿಕ ತಖ್ತೆಗಳ ಅಳವಡಿಕೆಯ ಬಗ್ಗೆ ಯಾವುದೇ ಮಾಹಿತಿಯಾಗಲೀ ಮಾರ್ಗಸೂಚಿಯಾಗಲೀ ಇಲ್ಲದಿರುವುದು ಕಂಡುಬಂದಿರುತ್ತದೆ. ಅಲ್ಲದೇ 15ನೇ ಮೇ 2023ರ ವರೆಗೆ ಬಹತೇಕ ಸಂಘಗಳು ಆರ್ಥಿಕ ತಖ್ತೆಗಳನ್ನು ಹಳೆಯ ಮಾದರಿಯಲ್ಲೆ ತಯಾರಿಸಿ ಆಡಳಿತ ಮಂಡಳಿಯಲ್ಲಿ ಅನುಮೋದಿಸಿಕೊಂಡಿರುತ್ತವೆ. ಆದ್ದರಿಂದ ನೂತನವಾಗಿ ಪ್ರಚುರಪಡಿಸಿದ ಮಾದರಿ ಆರ್ಥಿಕ ತಖ್ತೆಗಳ ಅಳವಡಿಕೆಯನ್ನು ತಕ್ಷಣವೇ ಜಾರಿಗೊಳಿಸುವುದು ಅಥವಾ ಲೆಕ್ಕಪರಿಶೋಧಕರು ಸದರಿ ಮಾದರಿಯಲ್ಲಿ ಆರ್ಥಿಕ ತಖ್ತೆಗಳನ್ನು ಪಡೆಯುವುದು ಸಾಧ್ಯವಾಗವುದಿಲ್ಲ.

ಅಂದರೆ ಸದ್ಯ ಇಲಾಖೆಯು ಕೇವಲ ಲೆಕ್ಕ ಪರಿಶೋಧಕರಿಗೆ ಮಾತ್ರ ಮಾಹಿತಿ ಒದಗಿಸುವ ಪ್ರಕ್ರಿಯೆ ನಡೆಸಿರುವುದು ಇದರಿಂದ ವೇದ್ಯವಾಗುತ್ತಿದೆ. ಆದ್ದರಿಂದ ಒಟ್ಟಾರೆಯಾಗಿ ಲೆಕ್ಕ ಪರಿಶೋಧನೆಯ ಪ್ರಕ್ರೀಯೆಯು ನಿಧಾನಗತಿಯಲ್ಲಿ ಸಾಗುತ್ತ ಸಮಯಾನುಸಾರ ವರದಿ ಸಲ್ಲಿಕೆಯಾಗುವುದು ವಾಸ್ತವಿಕವಾಗಿ ಕಷ್ಟಸಾಧ್ಯವಾಗಿರುತ್ತದೆ.

**ಲೆಕ್ಕಪತ್ರಗಳನ್ನು ತಯಾರಿಸುವುದು ಆಡಳಿತ ಮಂಡಳಿಯವರ ಕರ್ತವ್ಯವಾಗಿರುವುದರಿಂದ, ತಾವು ಪ್ರಚುರ ಪಡಿಸಿದ ಮಾದರಿಯಲ್ಲಿ ಲೆಕ್ಕಪತ್ರಗಳನ್ನು ಸಂಘದವರು ತಯಾರಿಸಿ ಲೆಕ್ಕಪರಿಶೋಧಕರಿಗೆ ಹಾಜರು ಪಡಿಸದೇ ಇದ್ದ ಪಕ್ಷದಲ್ಲಿ, ಲೆಕ್ಕಪರಿಶೋಧಕರು ಹೊಣೆಗಾರರಾಗುವುದಿಲ್ಲ.**

ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ನೂತನವಾಗಿ ಪ್ರಚುರಪಡಿಸಿದ ಮಾದರಿ ಆರ್ಥಿಕ ತಖ್ತೆಗಳ ಅಳವಡಿಕೆಯನ್ನು ಮುಂದಿನ ದಿನಗಳಲ್ಲಿ, ಆರ್ಥಿಕ ವರ್ಷ ಪ್ರಾರಂಭವಾಗುವ ಮುಂಚಿತವಾಗಿ ಸಂಘಗಳ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕರುಗಳ ಗಮನಕ್ಕೆ ಬರುವಂತೆ ನಿಯಮಾನುಸಾರ ಪ್ರಕಟಿಸಿ ನಂತರ ಜಾರಿಗೆ ತರುವಂತೆ ಈ ಮೂಲಕ ಕೋರಲಾಗಿದೆ.

ಇಂತಿ,

ತಮ್ಮ ವಿಶ್ವಾಸಿಗಳು

**For Karnataka State Chartered Accountants Association ®**

| CA PRAMOD SRIHARI | CA VIJAYKUMAR M PATEL | CA SIDDESH NAGARAJ GADDI | CA C YERRISWAMY |
|---|---|---|---|
| President | Secretary | Chairman Representation Committee | Chairman Co-Operative & NPO Committee |